# ಬರಿಗಾಲಿನ ಸಂತ

ಕಳೆದ ವಾರ ಕೆನಡಾ ದೇಶದ ಚಿತ್ರಕಲಾವಿದ, ಮಿತ್ರ ನಾರ್ಮನ್ ಥೋಮನ್ ಅವರಿಂದ ಒಂದು ಇ– ಮೇಲ್ ಬಂತು. 'ಅಮೆರಿಕಾದ ಶಿಕಾಗೊ ನಗರದ ಆರ್ಟ್ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರಸಿದ್ಧ ಕಲಾವಿದ ಎಂ.ಎಫ್ ಹುಸೇನ್ ಅವರ ಮೂರು ಫಲಕಗಳ (tryptech) ಕಲಾಕೃತಿಗಳ ಪ್ರದರ್ಶನ ನಡೆಯುತ್ತಿದೆ. ಅದು ಭಾರತದಲ್ಲಿ ಸುದ್ದಿಯಾಗಿದೆಯೆ? ನನಗೆ ಅನುಮಾನ'. ಎಂದು ಬರೆದಿದ್ದರು. ಅವರು ಅಂದುಕೊಂಡಂತೆ ಭಾರತದ ಯಾವ ಮಾಧ್ಯಮದಲ್ಲಿಯೂ ಅದು ಸುದ್ದಿಯಾಗಲಿಲ್ಲ. ಕವಿ, ಕಲಾವಿದರಿಗೆ ಜಗತ್ತು ವಿಶಾಲವಾಗಿ ತೆರೆದುಕೊಳ್ಳುತ್ತದೆ ಎನ್ನುವುದಕ್ಕೆ ಈ ಘಟನೆ ಸಾಕ್ಷಿ.

ಬರಿಗಾಲಿನ ಸಂತ ಎಂದೇ ಹೆಸರುವಾಸಿಯಾಗಿದ್ದ ಮಖ್ಬೂಲ್ ಫಿದಾ ಹುಸೇನ್ ಭಾರತೀಯ ಸಮಕಾಲೀನ ಕಲೆಗಳ ಪಿತಾಮಹ ಎನಿಸಿಕೊಂಡಿದ್ದರು. ಅವರು ಹುಟ್ಟಿದ್ದು ಮಹಾರಾಷ್ಟ್ರದ ಪಂಢರಾಪುರದಲ್ಲಿ ದಿ. 17.09.1915 ರಂದು. ಒಂದೂವರೆ ವರ್ಷಕ್ಕೆ ತಾಯಿಯನ್ನು ಕಳೆದುಕೊಂಡ ಬಾಲಕ ಮರುಮದುವೆಯಾಗಿ ಇಂದೋರ್‌ಗೆ ತೆರಳಿದ ಅಪ್ಪನೊಡನೆ ಜೀವನ ಕಳೆದದ್ದು ಕಡಿಮೆ. 1935ರಲ್ಲಿ ಮುಂಬೈನ ಜೆಜೆ ಕಲಾ ಶಾಲೆಯನ್ನು ಸೇರಿದ ಮೇಲೆ ಅದೃಷ್ಟ ಬದಲಾಯಿಸಿತು. ಮೊದಲಿಗೆ ಬಾಲಿವುಡ್ ಸಿನಿಮಾಗಳ ದೊಡ್ಡ ಚಿತ್ರಪಟಗಳಿಗೆ ಬಣ್ಣ ತುಂಬುತ್ತಾ ಹೊಟ್ಟೆಹೊರೆಯುತ್ತಿದ್ದ ಹುಸೇನ್ ಭಾರತದ ಅತಿ ಹೆಚ್ಚು ಸಂಭಾವನೆ ಪಡೆಯುವ ಕಲಾವಿದ ಎನ್ನುವವರೆಗೆ ಬೆಳೆದರು. ಒಮ್ಮೆ ನಡೆದ ಕ್ರಿಷ್ಟೀ ಹರಾಜಿನಲ್ಲಿ ಇವರ ಒಂದು ಕಲಾಕೃತಿ 20 ಲಕ್ಷ ಡಾಲರುಗಳಿಗೆ ಮಾರಾಟವಾಗಿ ದಾಖಲೆಯಾಯಿತು. ಫೋರ್ಬ್ಸ್ ನಿಯತಕಾಲಿಕೆ ಇವರನ್ನು 'ಭಾರತದ ಪಿಕಾಸೊ' ಎಂದು ಕರೆಯಿತು.

ಇಂತಹ ಮಹಾನ್ ಕಲಾವಿದನಿಗೆ 'ದೇವದೂಷಕ' (blasphemer) ಎಂಬ ಕಳಂಕ ಹತ್ತಿಕೊಂಡದ್ದು ಹೇಗೆ? ಪ್ರತಿಯೊಬ್ಬ ಕಲಾವಿದನೂ ತನ್ನ ನೆಲಮೂಲ ಸಂಸ್ಕೃತಿಯಿಂದಲೇ ವಿಷಯಗಳನ್ನು ಹೆಕ್ಕಿ ಕಲಾ ಸೃಷ್ಟಿಯಲ್ಲಿ ತೊಡಗುತ್ತಾನೆ. ಹುಸೇನ್‌ರಿಗೂ ಈ ದೇಶದ ಇತಿಹಾಸ ಮತ್ತು ಪುರಾಣಗಳು ಆಕರವಾದವು. ಭಾರತೀಯ ಸಂಸ್ಕೃತಿ ಅತ್ಯಂತ ಶ್ರೀಮಂತವಾದದ್ದು ಎಂಬ ಮಾತು ಸವಕಲಾಗಿದೆ. ಶ್ರೀಮಂತಿಕೆ ಎಂದರೆ ಅಲ್ಲಿ ಅಗೆದಷ್ಟೂ ಸಿಗುತ್ತದೆ. ಅಷ್ಟೇ ಅಲ್ಲ ಸಿಕ್ಕಿದ್ದು ಸೃಜನ ಶಕ್ತಿಯನ್ನು ಗುಣಾಕಾರೋಪಾದಿಯಲ್ಲಿ ಬೆಳೆಸುತ್ತದೆ. ಪುರಾಣದ ಜನಪ್ರಿಯ ಕಥನವೊಂದನ್ನೆ ಬಳಸಿ ಹೇಳುವುದಾದರೆ ರಾಕ್ಷಸನ ಒಂದು ಹನಿ ರಕ್ತ ನೆಲಕ್ಕೆ ಬಿದ್ದಿತೆಂದಾದರೆ ಅಲ್ಲಿ ಮತ್ತೊಬ್ಬ ರಾಕ್ಷಸ ಹುಟ್ಟಿ ಯುದ್ಧಸನ್ನದ್ಧನೂ ಆಗಿಬಿಟ್ಟಿರುತ್ತಾನೆ. ಅದನ್ನು ತಡೆಯಲು ದುರ್ಗೆ ತನ್ನ ನಾಲಗೆಯನ್ನು ನೆಲಕ್ಕೆ ಹಾಸಿ ಒಂದು ಹನಿ ರಕ್ತವೂ ನೆಲಕ್ಕೆ ಬೀಳದಂತೆ ಎಚ್ಚರವಹಿಸಿತ್ತಾ, ಯುದ್ಧ ಮಾಡುತ್ತಾ ರಾಕ್ಷಸನ್ನು ಕೊಲ್ಲಬೇಕಾಗುತ್ತದೆ. ಈ ಅದ್ಭುತವಾದ ರೋಚಕ ರೌದ್ರ ರಸ ಕಲ್ಪನೆಯನ್ನು ಕಲಾವಿದನೊಬ್ಬ ಹೇಗೆಲ್ಲ ವಿಸ್ತರಿಸಬಲ್ಲ. ಆಕಾಶವೇ ಮಿತಿ. ಹುಸೇನ್ ಒಳಗಿನ ಕಲಾವಿದ ದುರ್ಗೆಯ ನಾಲಗೆಯ ಪ್ರಮಾಣವನ್ನು ಊಹಿಸಿ ದುರ್ಗೆಯನ್ನು ಕಲ್ಪಿಸಿದ. ಹನುಮಂತನ ಬಾಲವನ್ನು ಮತ್ತಷ್ಟು, ಮತ್ತಷ್ಟು ಬೆಳೆಸಿದ. ಹಿಂದೂ ಧರ್ಮೀಯರಿಗೆ ಸಹಜವಾಗಿ ಕೋಪಬಂದುಬಿಟ್ಟಿತು.

ಸೃಷ್ಟಿಯ ಅಭೇದಿತ ರಹಸ್ಯಕ್ಕೂ, ನಗ್ನತೆಗೂ ಸಂಬಂಧವಿದೆ. ಎಲ್ಲ ಕಲಾವಿದರಿಗೂ ಅದು ಪ್ರಿಯವೆ. ಬೇರೆ ಧರ್ಮಗಳಲ್ಲಿ ಪುರಾಣಗಳು ಕಡಿಮೆ. ಇದ್ದರೂ ಇಷ್ಟು ರಸವತ್ತಾಗಿಲ್ಲ. ಹುಸೇನ್ ಅನ್ಯಧರ್ಮೀಯನಾದ್ದರಿಂದ ಇದು ಉದ್ದೇಶಪೂರ್ವಕ ಎಂದು ಬಿಂಬಿಸಲಾಯಿತು. ವಿಷಾದ ವ್ಯಕ್ತಪಡಿಸಿದರೂ ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಒಮ್ಮೆ ಒಂಬತ್ತು ಧರ್ಮಗಳನ್ನು ಕುರಿತಾದ ಚಿತ್ರಿಕೆಗಳ ಪ್ರದರ್ಶನವನ್ನು ಸಂಯುಕ್ತರಾಷ್ಟ್ರಗಳ ಭವನದಲ್ಲಿ ಏರ್ಪಡಿಸಲಾಗಿತ್ತು. ಅಲ್ಲಿಯೂ ಹಿಂದೂ ಸಂಸ್ಕೃತಿಯನ್ನು ಭ್ರಷ್ಟಗೊಳಿಸಲಾಗುತ್ತಿದೆ ಎಂಬ ಆರೋಪ ಕೇಳಿಬಂದಿತ್ತು. ಮೂಲಭೂತವಾದಿಗಳು ಮುಗಿಬಿದ್ದು ಹಲವು ಕಡೆಗಳಲ್ಲಿ ವ್ಯಾಜ್ಯ ಹೂಡಿದರು. ಜೀವಕ್ಕೆ ಧಮಕಿ ಹಾಕಿದರು. ಅದರಿಂದ ಸಹಿಸಲಸಾಧ್ಯವಾದ ಮಾನಸಿಕ ಯಾತನೆಗೆ ಸಿಲುಕಿದ ಹುಸೇನ್ ದೇಶ ಬಿಟ್ಟು ಕತಾರ್ ಪ್ರಜೆಯಾದರು.

2010ರಲ್ಲಿ ಖ್ಯಾತ ಉದ್ಯಮಿ ಲಕ್ಷ್ಮಿ ಮಿತ್ತಲ್‌ರ ಪತ್ನಿ ಉಷಾ ಮಿತ್ತಲ್ ಮೊಹೆಂಜೋದಾರೋ ದಿಂದ ಹಿಡಿದು ಇಲ್ಲಿವರೆಗಿನ ಭಾರತೀಯ ನಾಗರಿಕತೆಯನ್ನು ಬಿಂಬಿಸುವ 33 ಫಲಕಗಳ ಚಿತ್ರಕೃತಿಗಳನ್ನು ರಚಿಸಲು ಲಂಡನ್‌ಗೆ ಬರಮಾಡಿಕೊಂಡರು. ತಮ್ಮ ಮಹಾತ್ವಾಕಾಂಕ್ಷೆಯು ಸಾಕಾರವಾಗುತ್ತಿದೆ ಎಂದುಕೊಂಡ ಹುಸೇನ್‌ಗೆ ಎಂಟನ್ನು ಮಾತ್ರ ಮುಗಿಸಲು ಸಾಧ್ಯವಾಗುತ್ತದೆ. ಗಾಂಧಿಯಿಂದ ಗಣೇಶನವರೆಗೆ, ಮದರ್ ಥೆರೇಸಾ ಅವರಿಂದ ರಾಮಾಯಣ ಮಹಾಭಾರತದವರೆಗೆ ಇವರ ಕುಂಚ ಹರಿಯುತ್ತದೆ. ಇವರಿಗೆ 90ರ ಪ್ರಾಯದಲ್ಲಿಯೂ ಬೆನ್ನು ಬಿಡದ ತೆವಲುಗಳಿದ್ದವು. ಮಾಧುರಿ ದೀಕ್ಷಿತ್ ಎಂಬ ನಟಿಯ ಸರಣಿ ಚಿತ್ರಪಟಗಳು, ಗಜಗಾಮಿನಿ ಎಂಬ ಸಿನಿಮಾ ನಿರ್ಮಾಣ ಕೆಲವು ಉದಾಹರಣೆಗಳಷ್ಟೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಬ್ಬ ಪ್ರಜೆಯಾಗಿ ಎಂದೂ ಓಟು ಹಾಕದ ಇವರನ್ನು ರಾಜ್ಯಸಭೆಯ ಸದಸ್ಯರನ್ನಾಗಿ ನಾಮಕರಣ ಮಾಡಲಾಯಿತು. ಖ್ಯಾತ ಸಂಗೀತ ವಿದ್ವಾನ್ ರವಿಶಂಕರ್, ಸಾಹಿತಿ ಆರ್. ಕೆ. ನಾರಾಯಣ್ ಅವರೊಡನೆ ಆರು ವರ್ಷಗಳ ಕಾಲ ಮೇಲ್ಮನೆಯಲ್ಲಿ ಕುಳಿತು ಬಂದದ್ದಷ್ಟೆ, ಒಂದು ಮಾತೂ ಆಡಲಿಲ್ಲ. ಒಂದು ಪ್ರಶ್ನೆಯನ್ನೂ ಕೇಳಲಿಲ್ಲ.

ವಿವಾದಗಳು ಅವರನ್ನು ಯಾವಾಗಲೂ ಹಿಂಬಾಲಿಸುತ್ತಿದ್ದವು. 2011ರಲ್ಲಿ ಅವರು ಸಾವನ್ನಪ್ಪುವ ಮುಂಚೆ 5 ವರ್ಷಗಳ ಕಾಲ ಭೀತಿಯಿಂದ ದೇಶದ ಹೊರಗಿರಬೇಕಾದಾಗ ಕೊನೆ ಗಳಿಗೆಯವರೆಗೂ ಅವರು ಹೇಗಾದರೂ ಮಾಡಿ ಒಂದು ಮಧ್ಯಾಹ್ನಕ್ಕಾದರೂ ಮುಂಬೈಗೆ ಹೋಗಿ ಒಂದು ಚಹಾದಂಗಡಿಯಲ್ಲಿ ಚಹಾ ಕುಡಿದು ವಾಪಸು ವಿಮಾನ ಹತ್ತಬೇಕೆಂದು ಹಂಬಲಿಸುತ್ತಿದ್ದರಂತೆ. ಶಿಕಾಗೊ ಪ್ರದರ್ಶನದಿಂದ ಯಾರು ನೆನೆಯಲಿ, ಬಿಡಲಿ ಕಲೆಗೆ ಸಾವಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಯಿತು.

■ ಮೂಚಿ

## ಮಾತೇ ಮುತ್ತು

★ ಜ್ಞಾನವಂತ ಮನುಷ್ಯನಿಗೆ ವೈರಿಗಳನ್ನು ಪ್ರೀತಿಸುವುದೂ ಗೊತ್ತು, ಸ್ನೇಹಿತರನ್ನು ದ್ವೇಷಿಸುವುದೂ ಗೊತ್ತು.

— ಫ್ರೆಡ್ರಿಕ್ ನೀಷೆ

★ ಪ್ರಶಾಂತ ಮನಸ್ಸು ಆಂತರಿಕ ಶಕ್ತಿ ಮತ್ತು ಆತ್ಮವಿಶ್ವಾಸವನ್ನು ನೀಡುತ್ತದೆ. ಉತ್ತಮ ಆರೋಗ್ಯಕ್ಕೆ ಅದೇ ಅಗತ್ಯ.

–ದಲೈ ಲಾಮಾ

★ ವಾಸ್ತವವನ್ನು ಅನುಭವಿಸಲು ಕೇವಲ ಪಾಂಡಿತ್ಯ ಸಾಕಾಗುವುದಿಲ್ಲ; ತಿಳಿವಳಿಕೆಯ ಒಳಗಣ್ಣು ಬೇಕು.

–ಆದಿ ಶಂಕರ

★ ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ, ನಮ್ಮ ಕಷ್ಟಗಳೂ ಕೂಡಾ.

–ಚಾರ್ಲಿ ಚಾಪ್ಲಿನ್

★ ಯಾವ ಮೂರ್ಖನೂ ತಿಳಿದುಕೊಳ್ಳಬಲ್ಲ. ಆದರೆ ಸಮಸ್ಯೆ ಇರುವುದು ಅರ್ಥ ಮಾಡಿಕೊಳ್ಳುವುದರ ಬಗ್ಗೆ.

–ಆಲ್ಬರ್ಟ್ ಐನ್‌ಸ್ಟೀನ್

★ ಎಷ್ಟೇ ಚತುರ ಕಳ್ಳನಾದರೂ ಜ್ಞಾನವನ್ನು ದೋಚಲಾಗದು. ಜ್ಞಾನ ಎನ್ನುವುದೊಂದು ಅಮೂಲ್ಯ ನಿಧಿ.

–ಫ್ರಾಂಕ್ ಬಾಮ್

★ ಬಾತುಕೋಳಿಯ ಮೊಟ್ಟೆಗಳಿಂದ ಬಾತುಕೋಳಿಗಳೇ ಹುಟ್ಟುತ್ತವೆ, ಹಾವಿನ ಮರಿಗಳಲ್ಲ.

–ಚಾರ್ವಾಕ

★ ನಾನು ಯಾರಿಗೂ ಏನನ್ನೂ ಕಲಿಸಲಾರೆ. ಆದರೆ ಅವರು ಯೋಚಿಸುವಂತೆ ಮಾಡಬಲ್ಲೆ.

–ಸಾಕ್ರೆಟಿಸ್

★ ನೀವು ಯಾರನ್ನಾದರೂ ಪ್ರೀತಿಸುತ್ತೀರಾದರೆ ಅವರನ್ನು ಹೋಗಲು ಬಿಟ್ಟುಬಿಡಿ. ನಿಜಕ್ಕೂ ಪ್ರೀತಿಸುತ್ತಿದ್ದರೆ ಮರಳಿ ಬಂದೇ ಬರುತ್ತಾರೆ. ಬರಲಿಲ್ಲ ಎಂದಾದರೆ ಅವರು ಪ್ರೀತಿಸಿಲ್ಲ ಎಂದರ್ಥ.

–ಖಲೀಲ್ ಗಿಬ್ರಾನ್